Regd No B G. 155

Sn

27-4-1951

49 th Year
೪೯ ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಕೆದಾರ್ ಎಂ ಏ ಸುಬ್ಬರಾಯರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಸ್ಪೈ

Protect the Cow
ಗೋಸಂರಕ್ಷಣೆ ಮಾಡಿ

ತಿಂಗಳಿಗೆ ಒಂದೆರಡು ದಿನ ಅನವನು ಬಿಡಿ

ಪ್ರಧಾನಿ ಲಾಲಬಹದ್ದೂರ್‌ರವರ ಮನವಿ

★

ಕೃಷಿ ಸಮಾಜ

ಬೆಲೆ ನಿಗದಿ ಮಾಡಿರುವುದು ರೈತರಿಗೆ ಪರಿಣಾಮಕಾರಿಯಾಗಿಲ್ಲವೆಂದೂ ನಿಗದಿ ಮಾಡುವ ಸಂದರ್ಭದಲ್ಲಿ ತನಗೆ ವಿಶ್ವಾಸ ನಿದ್ಯ ಕೊಡಬೇಕೆಂದೂ ಅಖಿಲ ಭಾರತ ಕೃಷಿ ಸಮಾಜದ ಅಧಿವೇಶನ ಸರ್ಕಾರವನ್ನು ಒತ್ತಾಯ ಮಾಡಿದೆ.

ಪ್ರಧಾನಿಗಳ ನುಡಿಗಳು

ಧಾನ್ಯಗಳೇ ಅಲ್ಲದೆ ಸಕ್ಕರೆ, ವನಸ್ಪತಿ, ವನಸ್ಪತಿ ಎಣ್ಣೆಗಳು ಮತ್ತು ಬಟ್ಟೆ ಬೆಲೆ ನಿಯಂತ್ರಣ ಆಗಬೇಕೆಂದು ಪ್ರಧಾನಿ ಶಾಸ್ತ್ರಿಗಳು ಹೇಳಿದರು.

ಹತ್ತು ಲಕ್ಷ ಜನಸಂಖ್ಯೆ ಇರುವ ಕಡೆ ಕಾರ್ಡು ಹಂಚಿಕೆ ಆಗಬೇಕೆಂದು ಪ್ರಧಾನಿ ಶಾಸ್ತ್ರಿಗಳು ನವ ದೆಹಲಿಯಲ್ಲಿ ಹೇಳಿದರು.

★

ಕಂಚಿ— ತಾವು ಮತ್ತೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರೆ ಅಲ್ಪಸಂಖ್ಯಾತರಿಗೆ ಸಂಪೂರ್ಣ ರಕ್ಷಣೆ ಕೊಡುವುದಾಗಿ ಅಧ್ಯಕ್ಷ ಅಯೂಬರು ಹೇಳಿದರು.

ಮಾಸ್ಕೋ— ರಷ್ಯಾ ಮತ್ತೊಂದು ಉಪಗ್ರಹವನ್ನು ಹಾರಿಸಿತೆಂದು ವಂದಿಯಾಗಿದೆ.

ತಿರುವೇಂದ್ರಂ— ಕೇರಳ ಚುನಾವಣೆಯಲ್ಲಿ ಡಿ ಎಂ ಕೆ ಸ್ಪರ್ಧಿಸುವುದು.

ನವದೆಹಲಿ— ಆಹಾರ ಬೆರಿಕೆ ನಿರೋಧಕ ಸದಾಚಾರ ಸಮಿತಿ ಜೋರಾಪುರ ಸಿದ್ಧಪಡಿಸಿದೆ

ಪ್ರಧಾನಿ ಲಾಲಬಹದ್ದೂರು ಶಾಸ್ತ್ರಿಯವರು ನಿನ್ನೆ ನವದೆಹಲಿಯಲ್ಲಿ ರಾಜ್ಯ ಮುಖ್ಯ ಮಂತ್ರಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ, ತಿಂಗಳಿಗೆ ಒಂದೆರಡು ದಿನ ಜನರು ಅನ್ನವನ್ನು ತ್ಯಜಿಸಿ ಗೋಧಿಯನ್ನು ಬಳಸಬೇಕೆಂದು ನುಡಿದರು.

ಪ್ರಧಾನಿಯವರು ತಮ್ಮ ಮಾತನ್ನು ಮುಂದುವರಿಸುತ್ತಾ, ವರ್ತಕರ ವೇಲೆ ವಿಶ್ವಾಸ ಹೋದುದರಿಂದಲೇ ಸರ್ಕಾರ ಕ್ರಮ ಕೈಕೊಳ್ಳಬೇಕಾಗಿದೆ ಎಂದು ನುಡಿದರು.

ನಿಯಂತ್ರಣ ಬೆಲೆಗಿಂತ ಅಹಾರ ಧಾನ್ಯಗಳನ್ನು ಹೆಚ್ಚಿಗೆ ಮಾರುವ ವರ್ತಕರ ಬಗ್ಗೆ ಶೀಘ್ರ ವಿಚಾರಣೆಯಾಗಬೇಕು, ವಿಶೇಷ ನ್ಯಾಯಾಲಯಗಳು ಆರಂಭವಾಗಿ ಒಂದೆರಡು ದಿನಗಳಲ್ಲಿಯೇ ವಿಚಾರಣೆ ಮುಗಿಯಬೇಕು, ಭಾರಿ ಮೊತ್ತದ ಜುಲ್ಮಾನೆ ವಿಧಿಸುವುದು ಮತ್ತು ಲೈಸನ್ಸು ಕಿತ್ತುಕೊಳ್ಳುವುದು ಆಗಬೇಕು, ಎಂದೂ ಹೇಳಿದರು.

ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಅಧ್ಯಕ್ಷತೆ ವಹಿಸಿದ್ದರು.

ಪೂನಾ— ಧೋಂಡು ರೈಲ್ವೇ ಅಂಗಳದಲ್ಲಿ ವ್ಯಾಗನ್ನನ್ನು ಲೂಟಿ ಮಾಡಲು ಪ್ರಯತ್ನಿಸಿದ 15 ಮಂದಿ ಗುಂಪಿನ ಮೇಲೆ ರಕ್ಷಣಾ ಪಡೆಯವರು ಗುಂಡು ಹಾರಿಸಿದರು : ಇಬ್ಬರು ಸತ್ತು ಮಿಕ್ಕವರು ಪರಾರಿಯಾದರು.

★

ಟೋಕಿಯೋ— ಶಮ್ಸ್ ಅಸಾರಿಫ್ ಗೃಹ ನಿಮಿತ್ತ ಪ್ರಧಾನಿ ಇಕೆಡಾರವರು ತಮ್ಮ ಪದವಿಗೆ ರಾಜೀನಾಮೆ ಕೊಡುವುದಾಗಿ ತಿಳಿಸಿರುವರು.

ಎಲ್ ಐ ಸಿ ವಾರ್ತೆ

ಬೊಂಬಾಯಿ— ಎಲ್ ಐ ಸಿ ಯಲ್ಲಿ ಎಲೆಕ್ಟ್ರಾನಿಕ್ ಕಂಪ್ಯೂಟರುಗಳ ಉಪಯೋಗ ಜಾರಿಯಲ್ಲಿ ಬಂದರೂ, ಯಾರೊಬ್ಬ ನೌಕರನನ್ನೂ ತೆಗೆದುಹಾಕುವುದಿಲ್ಲವೆಂದು ಅಧ್ಯಕ್ಷರಾದ ಶ್ರೀ ಬಿ ಕೆ ಕಾಲ್ ಹೇಳಿದರು.

★

ಲೂಟಿ ಭೀತಿ

ಕೊಯಮತ್ತೂರು— ಅಕ್ಕಿ ಲಾರಿಗಳನ್ನು ಪಾಪಿನಿಕೇನುಪಾಳ್ಯ ಮತ್ತು ಪೀಲಮೇಡು ಭಾಗಗಳಲ್ಲಿ ಗುಂಪುಗಳವರು ಅಡ್ಡಗಟ್ಟಿದಂತೆ ಸಶಸ್ತ್ರ ಪೋಲೀಸರು ಕಾವಲಿದ್ದಾರೆ : ಮೊನ್ನೆ ಭವಾನಿಗೆ ಹೋಗುತ್ತಿದ್ದ ಒಂದು ಅಕ್ಕಿ ತುಂಬಿದ ಲಾರಿಯನ್ನು ಗುಂಪಿನವರು ನಿಲ್ಲಿಸಿ ಲೂಟಿ ಮಾಡಲು ಪ್ರಯತ್ನಿಸಿದಾಗ ಪೋಲೀಸರು ಬಂದು ಓಡಿಸಿದರು.

★

ಬೆಂಗಳೂರಿನಲ್ಲಿ

ಮೊನ್ನೆ ಆಹಾರಾಭಾವ ಪ್ರದರ್ಶಕರು ಗಂಡಸರು, ಹೆಂಗಸರು, ಮಕ್ಕಳು ಸಾವಿರಕ್ಕೂ ಹೆಚ್ಚು ಮಂದಿ ಭಾರಿ ಮೆರವಣಿಗೆಯಲ್ಲಿ ರೇಸ್ ಕೋರ್ಸಿನಲ್ಲಿರುವ ಆಹಾರ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರ ನಿವಾಸದ ಹತ್ತಿರ ಹೋದರು — ಪೋಲೀಸು ಕವಿವಾಪನರು ಶ್ರೀ ಚಾಂಡಿಯವರು 20 ಮೂಟೆ ಅಕ್ಕಿ ತರಿಸಿ ಅಲ್ಲೇ ದಿಪೊಂಮಂತೆ ಮಾಡಿ, ಗುಂಪಿನಲ್ಲಿದ್ದ ಎಲ್ಲರಿಗೂ ತಲಾ 2 ಕಿಲೋ ಅಕ್ಕಿಯನ್ನು ಕಿಲೋಗೆ 90 ಪೈಸೆಯಂತೆ ಕೊಡಲಾಯಿತು.

★

ಮಹಾಜೋಧಿ ಪಸಿ

ನವದೆಹಲಿ— ಬುದ್ಧ ಜಯಂತಿ ಪಾರ್ಕಿನಲ್ಲಿ ಸಿಲೋನಿನ ಮಹಾಜೋಧಿ ವ್ಯಕ್ತಿದ ಪಸಿಯನ್ನು ಪ್ರಧಾನಿ ಶಾಸ್ತ್ರಿಯವರು ನೆಟ್ಟರು.

ಪೌರಭೆ

ಮೈಸೂರು — ಪೌರಸಭೆಯ ಸಾಧಾರಣ ಎಸಾಟಂಗು ತಾ|| 31 ಶನಿವಾರ ಮಧ್ಯಾಹ್ನ 4 ಗಂಟೆಗೆ ನಡೆಯುವುದು.

★

ಬೆಂಗಳೂರಿನಲ್ಲಿ ಕಾರ್ಡು ಹಂಚಿಕೆ

ಸನೆಂಬರು 1 ರಿಂದ ಬೆಂಗಳೂರಿನಲ್ಲಿ ಧಾನ್ಯ ಕೊಳ್ಳಲು ಕಾರ್ಡು ಹಂಚಿಕೆ ಆಗುವುದು.

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷ ನಿಶ್ಯಕ್ತಿಗೆ ಖಚಿತವಾಗಿ ಯಾದ ಯುವನದಕ್ಕೆಯೇ ಮುಪ್ಪಾದಂತೆ ಭಾವಿಸುವವರು ಮತ್ತು ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ|| ವೋಕಿಯವರ ಸಲಹೆ ಪಡೆಯಿರಿ.

ಇವರು ನರಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಸ್ಖಲನ, ಸ್ತ್ರೀಯರಲ್ಲಿ ಋತುಸಾಮಾನ್ಯದ ತೊಂದರೆ ಮತ್ತು ಇವೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣಪಡಿಸುವರು.

ಜನತಾ ಡಿಸ್ಪೆನ್ಸರಿ

ಸಲಹೆ ಕಾಲ { ಬೆಳಿಗ್ಗೆ 10 ರಿಂದ 1
ಪ್ರತಿ ದಿನವೂ { ಸಂಜೆ 4 ರಿಂದ 8

ಹೆಡ್ ಆಫೀಸ್ :
ನಂ ಬೇದಾರ್ ಛತ್ರಂ ರೋಡ್
ಬೆಂಗಳೂರು 9. ಫೋನ್ ನಂಬ್ರ 75332

ವಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ

ಅಷ್ಟಾವಧಾನ ಮಹಾಪಂಡಿತ, ಧುರಂಧರ, ಜ್ಯೋತಿರ್ವಿದ್ವನ್ಮಣಿ ಸಂಪತ್ಕುಮಾರ ಕೊಂಡಾಚಾರ್ಯರಿಂದ

ಪ್ರತಿ ಯುಗಾದಿವಾರ ಅಷ್ಟಮಿ ಪುಷ್ಯ-

ಶ್ರೀ ಧನ್ವಂತರಿ ಜಯಂತಿ

ಶ್ಲೋ ॥ ಶಂಖಂ ಸುಧಾಕಲಶಮೌಷಧಿ ಸಂಚಯಂಚ
ಚಕ್ರಂ ಪಂಚಾನನೀಯ ಕೈರ್ದಧಾನಂ ।
ಶೀತಾಂಶ ಮಂಜಲಗತಂ ಕರುಣಾವಯೋಧಿಂ
ಧನ್ವಂತರಿಂ ಸರವಂ ಸತತಂ ನಮಾಮಃ ॥

ಕಾರಣ್ಯಮೂರ್ತಿಯಾದ ಶ್ರಿಯಃಪತಿಯು ಬದ್ಧಜೀವಿಗಳು ತನ್ನನ್ನು ಆಶ್ರಯಿಸಿ ಮುಕ್ತಿಯನ್ನು ಹೊಂದಲಿ ಎಂಬ ಉದ್ದೇಶದಿಂದ ಕರಣಕಳೇಬರಗಳನ್ನು ಅನುಗ್ರಹಿಸಿದನು, ಶಾಸ್ತ್ರಗಳನ್ನು ಉಪದೇಶಿಸಿದನು : ಆದರೆ ಮಾಯೆಗೆ ವಶರಾದ ಜೀವಿಗಳು ಸಂಸಾರದಲ್ಲಿ ಸಿಲುಕಿ ನಾನಾ ತೆರದ ಪಾಪಗಳನ್ನು ಮಾಡುತ್ತಿರೆ ; 'ಪೂರ್ವಜನ್ಮಕೃತಂವಾಪಂ ವ್ಯಾಧಿರೂಪೇಣಬಾಧತೇ' ಎಂಬ ಪ್ರಮಾಣವಚನಾನುಸಾರ ಹಿಂದೆ ಮಾಡಿದ ಪಾಪಕರ್ಮಗಳಿಗೆ ಅನುಸಾರವಾಗಿ ಅನೇಕ ವಿಧವಾದ ವ್ಯಾಧಿಗಳು ಉಂಟಾಗುತ್ತವೆ : 'ಶರೀರಮಾದ್ಯಂ ಖಲು ಧರ್ಮ ಸಾಧನಂ' ಎಂಬಂತೆ ಆರೋಗ್ಯವಾಗಿದ್ದಲ್ಲಿ ಮಾತ್ರ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಬಹುದು : ಪೂರ್ವಜನ್ಮ ಕೃತ ದೋಷಗಳಿಂದ ವಾತಾದಿ ದೋಷಗಳು ಕುಪಿತಂಗಳಾಗಿ ಅನೇಕ ರೋಗಗಳಿಂದ ನರಳುತ್ತಿದ್ದರೆ ಯಾವ ಕೆಲಸವನ್ನು ತಾನೇ ಮಾಡಲಾದೀತು. ಇಂತಹ ಜೀವಿಗಳನ್ನು ಉದ್ಧರಿಸುವ ಸಲುವಾಗಿ ಶ್ರೀ ಹರಿಯು ಧನ್ವಂತರಿ ಅವತಾರವನ್ನು ಮಾಡಿ ಜಗತ್ತಿಗೆ ಆಯುರ್ವೇದಶಾಸ್ತ್ರವನ್ನು ನೀಡಿದನು ; ಈ ಶಾಸ್ತ್ರವು ಪಿತಾಮಹನಿಂದ ಹಿಂಣ್ಯಗರ್ಭನಿಗೆ, ಅವನಿಂದ ದಕ್ಷಪ್ರಜಾಪತಿಗೆ, ಅವನಿಂದ ಅಶ್ವಿನೀಕುಮಾರರು, ಅವರಿಂದ ಇಂದ್ರನು, ಅವನಿಂದ ಭಂದ್ವಾಜ, ಅವರಿಂದ ಅಂಗಿರ, ಜಮಡಗ್ನಿ, ವಸಿಷ್ಠ, ಕಶ್ಯಪಾದಿ ಋಷಿಗಳಿಗೆ ಪರಂಪರೆಯಾಗಿ ಉಪದೇಶಿಸಲ್ಪಟ್ಟಿತು : ಅವರು ಪುನರ್ವಸು ಆತ್ರೇಯ ಮಹರ್ಷಿಗೆ, ಅವನು ಅಗ್ನಿವೇಶ, ಭೇಲ ಜತೂಕರ್ಣ, ಪಾರಾಶರ, ಸುಶ್ರುತಾದಿ ಮಹರ್ಷಿಗಳಿಗೆ ಶಿಷ್ಯಪಾರಂಪರ್ಯ ಸಂಪ್ರದಾಯತ್ವೇನ, ಭೂತದಯಾದೃಷ್ಟಿಯಿಂದ ಲೋಕಕಲ್ಯಾಣಾರ್ಥವಾಗಿ ಉಪದೇಶಿಸಿದರು : ಈ ಆಯುರ್ವೇದ ಶಾಸ್ತ್ರವು (1) ಕಾಯಚಿಕಿತ್ಸಾ (2) ಕೌಮಾರಭೃತ್ಯ (3) ಅಗದತಂತ್ರ (4) ಶಲ್ಯತಂತ್ರ (5) ಶಾಲಾಕ್ಯತಂತ್ರ (6) ಭೂತವಿದ್ಯಾ (7) ರಸಾಯನ ತಂತ್ರ ಮತ್ತು (8) ಸಂಬಾಧಪಟ್ಟ ಇತರ ಶಾಸ್ತ್ರಗಳ ಸಮೇತ ಅಷ್ಟಾಂಗ ಆಯುರ್ವೇದವೆಂದು ಪ್ರಸಿದ್ಧಿಗೊಂಡಿದೆ : ಈ ಆಯುರ್ವೇದ ವೈದ್ಯ ಶಾಸ್ತ್ರ ಪದ್ಧತಿಯು ವೈಜ್ಞಾನಿಕ ಮರ್ಮವನ್ನು ತಿಳಿದು ಆಶ್ಚರ್ಯಗೊಂಡ ಅನೇಕ ವಿದೇಶೀಯ ಆಂಗ್ಲಾ ವೈದ್ಯರುಗಳು ಪ್ರಶಂಶೆ ಮಾಡಿದ್ದಾರೆ ; ಪ್ರಾಚೀನ ಕಾಲದಲ್ಲಿ ಈ ಶಾಸ್ತ್ರವು ಭಾರತದಲ್ಲಿ ಮಾತ್ರವಲ್ಲದೇ, ಇಲ್ಲಿಂದ ಅರೇಬಿಯಾ ಈಜಿಪ್ಟ್, ಗ್ರೀಸ್, ರೋಮ್ ಮುಂತಾದ ಮಧ್ಯಪ್ರಾಚ್ಯ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿಯೂ ಸಹ ಪ್ರಚಾರವಾಗಿದ್ದಿತು. [ಮುಂದುವರಿಯುವುದು

ಅನಂತನಂಸಿಂಹಯ್ಯಂಗಾರ್
ಶಾಸ್ತ್ರಧರ್ಮಪ್ರಚಾರ ಸಭಾ (ಶಾಖೆ)
ಹೊಂಗನೂರು, ಮೈಸೂರು ಜಿಲ್ಲೆ

ದಸರಾ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮ- ಎಗ್ಜಿಬಿಷನ್ನಿನಲ್ಲಿ

ತಾ|| 28 ರಂದು ಸಂಜೆ 6 ರಿಂದ ನಾಗಸ್ವರ, ನಾಟಕ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ಬಾಯಿದೆ ಮುಗಿದಿರುವವರು ದಯವಾಡಿ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಎಂ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

ವುಡ್‌ಲಾಂಡ್ಸ್ 23-10-64 ರಿಂದ
ಶಿ ಸು ಅಮೋಘ ಆರಂಭ

ವಹಿಡಾ ರಹಿರ್ಮಾ ವಿಡಿಯುಳುಮಾರ್ ಜಾನಿವಾಕರ್ ನಿಕೂಪರಾಯ್
ಅಧಿನಯಿಸುವ ಸುಂದರ ಹಿಂದೀ ಚಿತ್ರ

ಕೌನ್ ಆಪ್ ಕೌನ್ ಪರಾಯ

ಸಂಗೀತ- ರವಿ [ದಿನವಹಿ 3 ಪ್ರದರ್ಶನಗಳು]

ಆಪೇರಾ ಜನಪ್ರಿಯ 3 ನೇ ವಾರ

ಸುಂದರ ತಮಿಳು ಚಿತ್ರ [ದಿನ 3 ಆಟಗಳು]

ವೀರಾಂಗನೆ

ಪಾತ್ರ- ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ ಬಾಲಾಜಿ, ಸುಕುಮಾರಿ, ಅಶೋಕ್

ರಣಜಿತ್‌ನಲ್ಲಿ ಯಶಸ್ವಿ 4 ನೇ ವಾರ

- ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ -
ಸಕಲರೂ ನೋಡಿ ಆನಂದಿಸಬೇಕಾದ ಅಭ್ಯುದಯ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು
ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು
ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.
4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನೆಲ್ಲ ಮನ್ನಾ ಮಾಡಿದೆ
ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI

SUDHA

Superb Tonic

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.